ಕನ್ನಡದ ಪ್ರಮುಖ ವಿಮರ್ಶಕರಲ್ಲೊಬ್ಬರಾದ ಎಸ್.ಆರ್. ವಿಜಯಶಂಕರ ತಮ್ಮ ಅಂಕಣ ಬರಹಗಳ ಮೂಲಕ ವ್ಯಾಪಕ ಓದುಗ ಸಮೂಹವನ್ನು ತಲುಪಿದವರು. 'ಒಳದನಿ', 'ಅನವರತ', 'ಹೂಬೆರಳು', 'ಅಪ್ರಮೇಯ', 'ಬೆಳುದಿಂಗಳ ನೋಡಾ' ಹಾಗೂ 'ನಿಜಗುಣ' ವಿಜಯಶಂಕರ ಅವರ ವಿಮರ್ಶೆ ಹಾಗೂ ಸಾಂಸ್ಕೃತಿಕ ಚಿಂತನೆಗಳ ಬರಹಗಳನ್ನೊಳಗೊಂಡ ಪ್ರಮುಖ ಕೃತಿಗಳು. 'ಮಾಸ್ತಿ ವೆಂಕಟೇಶ ಅಯ್ಯಂಗಾರ್', 'ಕೀರ್ತಿನಾಥ ಕುರ್ತಕೋಟಿ' ಹಾಗೂ 'ಕೆ.ವಿ. ತಿರುಮಲೇಶ್', ಪ್ರಮುಖ ಲೇಖಕರ ಬದುಕು–ಬರಹಗಳ ವಿಶ್ಲೇಷಣೆಗೆ ಮಾದರಿಯಂತಿರುವ ಕೃತಿಗಳು.

ಬಹಳ ಗಂಭೀರವಾಗಿ ಸಂಸ್ಕೃತದಲ್ಲೇ ಇದೆ ಎಂದರು. ಅದೇನೆಂದು ಕೇಳಲಾಗಿ ಹೇಳಿದರು:

**ರಾಮಾಯ ರಾಮಭದ್ರಾಯ ರಾಮ ಚಂದ್ರಾಯ ವೇದಸೇ |**
**ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ||**

ಮನೆಮಂದಿ ಶ್ರೀರಾಮನನ್ನು ರಾಮಭದ್ರ, ರಾಮಚಂದ್ರ ಎಂದರಂತೆ. ಆಗ ಸಭೆಯಲ್ಲಿದ್ದ ಋಷಿಮುನಿಗಳು ಅವ ವೇದಗಳನ್ನು ಬಲ್ಲವ, ಹಾಗಾಗಿ ವೇದಸೇ ಎಂದರು. ಅವನು ರಘುವಂಶದ ನಮ್ಮ ನಾಥ, ರಾಜ ಎಂದು ಸಭೆಯಲ್ಲಿದ್ದ ಪ್ರಜೆಗಳು ಹೇಳುವಾಗ ಒಳಗಿದ್ದ ಹೆಣ್ಣುಮಕ್ಕಳೆಲ್ಲಾ - ಅವ ನಮ್ಮ ಸೀತೆಯ ಗಂಡ ಎಂದರು. ಎಲ್ಲರೂ ಆಗ ಹೇಳಿದ್ದು ಅಂತಹ ಸೀತಾಪತಿಗೆ ನಮಃ. ಅವ ದೈಹಿಕವಾಗಿ ಸೀತೆಯನ್ನು ಕಾಡಿಗೆ ಕಳುಹಿಸಿದರೂ, ರಾಮನ ಮನಸ್ಸಲ್ಲಿ ಇದ್ದದ್ದು ಸೀತೆ ಮಾತ್ರ. ಹಾಗಾಗಿ ಅವ ಯಾವಾಗಲೂ ಸೀತಾಪತಿ. ಒಳಗಿದ್ದ ಹೆಂಗಸರಿಗೆ ಮಾತ್ರವಲ್ಲ, ಇಡೀ ಲೋಕವೇ ವಂದಿಸುವುದು ಸೀತಾಪತಿಗೆ. ಹಾಗೆ ರಾಜರತ್ನಂ ಕೂಡಾ ಪುಸ್ತಕದಲ್ಲಿ ಬರೆದಿದ್ದಾರೆ ಎಂದರು ಗೋವಿಂದರಾಯರು.

ರಾಯರು ಜಿ.ಪಿ. ರಾಜರತ್ನಂ ಹೆಸರು ಹೇಳಿದ್ದೂ ವೆಂಕ್ಟಪ್ಪ ಮರದ ಕೆಳಗೆ ಬಂದದ್ದೂ ಸರಿಯಾಯಿತು. 'ಏನ್ರೀ ಅದು ರಾಜರತ್ನಂ ಪುಸ್ತಕ. ಶ್ರೀರಾಮ, ಜೈ ಶ್ರೀರಾಮ್ ಅಂತ ಇಲ್ಲದ ಬುಕ್ಕುಗಳನ್ನೆಲ್ಲಾ ತೆಗೆದು ಬಿಸಾಕಿ, ದೇಶದ್ರೋಹಿಗಳ ವ್ಯವಹಾರವೇ ಬೇಡ. ಪೋಲೀಸು, ಫಿರ್ಯಾದು, ನ್ಯಾಯ ಒಂದೂ ಇಲ್ಲವಾ' ಎಂದ. ಈಗ ವೆಂಕಟರಾಮಾಚಾರ್ಯರಿಗೆ ಫಜೀತಿಯಾಯಿತು. ವೆಂಕ್ಟಪ್ಪನನ್ನು ಕುರಿತು 'ಯಾರೂ ದ್ರೋಹಿಗಳು ಅಲ್ಲಪ್ಪಾ, ಸೀತಾರಾಮನೂ ಶ್ರೀರಾಮನೂ ಒಬ್ಬನೇ ಅಲ್ವೇನಪ್ಪ. ದೇವರಂತಹ ಮಕ್ಕಳು. ಅವರ ನಡುವೆ ದೇವರ ಹೆಸರಲ್ಲಿ ಜಗಳ ಯಾಕೆ ಅಂತ ಹೇಳುತ್ತಿದ್ದೆ ಅಷ್ಟೆ. ನೀನು ಸಮಾಧಾನವಾಗಿರು' ಎಂದರು.

'ಏನಪ್ಪ ಮಕ್ಕಳೆ, ಆಟ ಸುರುಮಾಡಿ, ಜಗಳ ಅಲ್ಲ. ನಿಮಗೆ ಪ್ರೈಸ್ ಬೇಕೋ ಬೇಡವೋ?' ಎಂದರು ಆಚಾರ್ಯರು ಮಕ್ಕಳನ್ನು ನೋಡಿ. 'ಹೊಸದಾಗಿ ಆಟ ಸುರು ಮಾಡೋಣ' ಎಂದ ರಮೇಶ. ಸಾಧ್ಯವಿಲ್ಲ. 'ಅವ ರನ್ನೌಟ್' ಎಂದ ಶೀನ. ಮತ್ತೆ ಜಗಳ ಪ್ರಾರಂಭವಾಗುವ ಲಕ್ಷಣ ಕಂಡು ಅದ್ರಾಮ ಹೇಳಿದ: 'ಹೋಗಲಿ ಬಿಡ್ರೋ, ನಾನೇ ಪ್ಲೇ ಬಿಟ್ಟು ಕೊಡುತ್ತೇನೆ. ದುಗ್ಗಪ್ಪ ಮುಂದಿನ ಬ್ಯಾಟ್ಸ್‌ಮನ್. ಅವನು ಆಡಲಿ' ಎಂದ.

ನಮ್ಮ ಊರ ಕ್ರಿಕೆಟ್‌ನಲ್ಲಿ ತುಂಬಾ ಹೊತ್ತು ಔಟ್ ಆಗದೆ ಬ್ಯಾಟ್ ಮಾಡುವ ಬ್ಯಾಟ್ಸ್‌ಮನ್ ಪ್ಲೇ ಬಿಟ್ಟುಕೊಟ್ಟು ಔಟಾದ ಹಾಗೆ ಮುಂದಿನವರಿಗೆ ಬ್ಯಾಟ್ ಕೊಡುವ ಒಂದು ರೂಲ್ ಇದೆ. ಅದು ನಮ್ಮ ಊರಿನ ಒಳಗೆ ಮಾತ್ರ ಇರುವ ಕ್ರಿಕೆಟ್ ಆಟದ ರೂಲು. ಜಗಳ ನಿಲ್ಲಿಸಲು ಅದ್ರಾಮ ಆ ಲೋಕಲ್ ರೂಲು ಎಪ್ಲೈ ಮಾಡಿದ್ದ. ಜಗಳ ನಿಂತು ಆಟ ಮುಂದುವರಿಯಿತು.

'ಸ್ಥಳೀಯ ಸಮಸ್ಯಾ ಪರಿಹಾರಕ್ಕೆ ಒಂದು ಲೋಕಲ್ ರೂಲು ಇರುವ ವ್ಯವಸ್ಥೆ ಬೇಕು. ಎಲ್ಲಾ ಕಡೆಯೂ ಒಂದೇ ರೂಲು ಇರಬೇಕೆಂಬಲ್ಲಿ ಅದು ಆಗುವುದಿಲ್ಲ' ಎಂದು ನನ್ನ ಬಳಿ ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ನಾರಾಯಣ ಆಟ ನೋಡುತ್ತಾ ಹೇಳಿದ. ಅವನ ಆಪ್ತಮಿತ್ರ ಕೃಷ್ಣಭಟ್ಟ, 'ಅದೇ ಕಣೋ ಫೆಡರಲ್ ವ್ಯವಸ್ಥೆ ಅಂದರೆ' ಎಂದು ಹೇಳಿ ತಾನು ಬಿ.ಎ. ಡಿಗ್ರಿ ಕಾಲದಲ್ಲಿ ಓದಿದ ರಾಜ್ಯಶಾಸ್ತ್ರದ ತಿಳಿವಳಿಕೆಯನ್ನು ಪ್ರದರ್ಶಿಸಿದ. 'ಹೋ ಬೌಂಡರಿ' ಎಂಬ ಬೊಬ್ಬೆ ಮೈದಾನದಿಂದ ಕೇಳಿತು. ●